ಕ್ಷೇತ್ರಕ್ಕೆ ಎಂದಿಗೂ ಧಕ್ಕೆ ಬಾರದಂತೆ ಎಚ್ಚರಿಕೆ ವಹಿಸಬೇಕೆಂದು ಹೇಳಿತ್ತು. ಇಂದಿರಾಗಾಂಧಿ ಅವರ ಸಲಹೆಗಾರರಾಗಿದ್ದ ಡಾ. ಎಂ.ಜಿ.ಕೆ. ಮೆನನ್, ಈ ಕಣಿವೆಯಲ್ಲಿ ಯಾವುದೇ ಜಲ ಯೋಜನೆ ರೂಪಿಸಬಾರದೆಂಬ ಸಲಹೆ ನೀಡಿದ್ದರು. ಮಾಧವ ಗಾಡ್ಗೀಳ್ ಅವರು ವರದಿ ನೀಡುವ ಮೊದಲೇ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ. ಎ.ಕೆ. ಎನ್. ರೆಡ್ಡಿ ಮತ್ತು ಡಾ. ಡಿ.ಕೆ. ಸುಬ್ರಮಣ್ಯ ಅವರು ಪಶ್ಚಿಮಘಟ್ಟಗಳ ಇತಿಮಿತಿ ಬಳಕೆಯ ಬಗ್ಗೆ ಸಲಹೆ ನೀಡಿದ್ದರು. ಸಸ್ಯ ವಿಜ್ಞಾನಿಗಳಾದ ಡಾ. ಸಾಲ್ಡಾನ, ಡಾ. ಶಫಿವುಲ್ಲಾ ಅವರೂ ಪಶ್ಚಿಮ ಘಟ್ಟ ಸಂರಕ್ಷಣೆಯ ಬಗ್ಗೆ ಅಮೂಲ್ಯ ಸಲಹೆ ಸೂಚನೆ ನೀಡಿದ್ದರು. ‘ಚಿಪ್ಕೋ’ ಚಳವಳಿ ರೀತಿಯಲ್ಲಿ ಪ್ರತಿಭಟನೆಗಳನ್ನು ಪಾಂಡುರಂಗ ಹೆಗಡೆ ಅವರು ಸಂಘಟಿಸಿದ್ದಾರೆ. ಪರಿಸರ ಪ್ರೇಮಿಗಳಾದ ಪ್ರಹ್ಲಾದ್ ರಾವ್, ಸುರೇಶ್ ಹುಬ್ಳೀಕರ್, ಉಲ್ಲಾಸ್ ಕಾರಂತ್ ಮುಂತಾದವರ ಇಂದಿಗೂ ಪಶ್ಚಿಮ ಘಟ್ಟಗಳ ಶೋಷಣೆಯನ್ನು ವಿರೋಧಿಸಿ ಧ್ವನಿ ಎತ್ತುತ್ತಲೇ ಇದ್ದಾರೆ.

1986ರಲ್ಲಿ ಪಶ್ಚಿಮ ಘಟ್ಟಗಳನ್ನು ಉಳಿಸುವ ನಿಟ್ಟಿನಲ್ಲಿ ಪರಿಸರವಾದಿ, ಹೋರಾಟಗಾರ ಕೊಲ್ಕತ್ತಾದ ಡಾ. ಕೆ.ಸಿ. ಮಲ್ಹೋತ್ರಾ ಪಾದಯಾತ್ರೆ ಚಳವಳಿ ನಡೆಸಿದ್ದರು. ಮತ್ತೊಬ್ಬ ಪರಿಸರ ವಿಜ್ಞಾನಿ ಮಾಧವ ಗಾಡ್ಗೀಳ್, ಈ ಸೂಕ್ಷ್ಮ ಪ್ರದೇಶಗಳ ಬಗ್ಗೆ ಭೌತಿಕ ಪರಿಶೀಲನೆ, ಉಪಗ್ರಹಗಳ ಆಧಾರಿತ ನಕ್ಷೆಗಳನ್ನು ಆಧರಿಸಿ ವೈಜ್ಞಾನಿಕ ಅಧ್ಯಯನ ನಡೆಸಿ ಒಂದು ಸಂಶೋಧನೆಯ ವರದಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿದ್ದರು. ಆ ವರದಿಯ ಮುಖ್ಯ ವಸ್ತು, ಜೀವವೈವಿಧ್ಯ ಮತ್ತು ನಿವಾಸಿಗಳ ನಡುವಿನ ಸಂಘರ್ಷ ಹಾಗೂ ಸಹಬಾಳ್ವೆಯ ಕುರಿತಾದುದು.

ಒಂದು ಅಂದಾಜಿನ ಪ್ರಕಾರ, ಅಭಿವೃದ್ಧಿಯ ಹಾದಿಯಲ್ಲಿ 24 ಯೋಜನೆಗಳು ಸಿದ್ಧವಾಗಿದ್ದು, ಪಶ್ಚಿಮ ಘಟ್ಟ ಪರಿಸರದಲ್ಲಿ 16,85,000 ವೃಕ್ಷಗಳು ನಾಶವಾಗಲಿವೆ. ಹಾಗಾದರೆ, ಪರಿಸರದ ಜನರ ಬದುಕು ಹಾಳಾಗುವುದಲ್ಲದೆ, ರಾಜ್ಯದ ಜನರ ದೈನಂದಿನ ಜೀವನವೂ ಉಸಿರುಗಟ್ಟುವಂತಾಗುತ್ತದೆ. ಘಟ್ಟದಲ್ಲಿ ನದಿಗಳು ಸಾಯುವುದಿರಲಿ, ಹುಟ್ಟುವುದೇ ಇಲ್ಲ.

## ಗಾಡ್ಗೀಳ್ ವರದಿ ಏನು ಹೇಳುತ್ತದೆ?

1. ಪಶ್ಚಿಮಘಟ್ಟಗಳ ಪರಿಸರ ತಜ್ಞರ ಸಮಿತಿ (ಡಬ್ಲ್ಯೂ.ಜಿ.ಇ.ಇ.ಸಿ) ಇಡೀ ಪಶ್ಚಿಮಘಟ್ಟಗಳ ಪ್ರದೇಶಗಳನ್ನು ಪರಿಸರ ಸೂಕ್ಷ್ಮವಲಯ (ಇ.ಎಸ್.ಎ.) ಎಂದು ಶಿಫಾರಸು ಮಾಡಿದೆ.

2. ಈ ಘಟ್ಟದ ವ್ಯಾಪ್ತಿಗೆ ಬರುವ 142 ತಾಲ್ಲೂಕುಗಳನ್ನು ಒಂದು, ಎರಡು ಮತ್ತು ಮೂರನೇ ಹಂತ E.S.Z ಎಂದು ಪರಿಗಣಿಸಿದೆ.

3. ಮೊದಲ ಹಂತದಲ್ಲಿ ಗಣಿಗಾರಿಕೆ, ಉಷ್ಣವಿದ್ಯುತ್ ಸ್ಥಾವರ ಸೇರಿದಂತೆ ಅಭಿವೃದ್ಧಿ ಕಾಮಗಾರಿಗಳನ್ನು ಸಂಪೂರ್ಣವಾಗಿ ನಿರ್ಬಂಧಿಸಬೇಕು.

4. ಇ.ಎಸ್.ಝಡ್. ಒಂದರ ವ್ಯಾಪ್ತಿಯಲ್ಲಿ ನೂತನ ಜಲಾಶಯಗಳನ್ನು ನಿರ್ಮಿಸುವುದಕ್ಕೆ ಅವಕಾಶವಿಲ್ಲ.


ಗಾಡ್ಗೀಳ್ ವರದಿಗೆ ಒಂದು ವರ್ಗದ ವಿರೋಧ ಶುರುವಾದಾಗ, ಸರ್ಕಾರವು 2012ರಲ್ಲಿ ಬಾಹ್ಯಾಕಾಶ ತಜ್ಞ ಡಾ. ಕಸ್ತೂರಿ ರಂಗನ್ ಸಮಿತಿಗೆ ಶಿಫಾರಸು ಮಾಡಿತು. ಕಸ್ತೂರಿ ರಂಗನ್ ವರದಿಗೂ ಪುರಸ್ಕಾರ ಸಿಗದಾದಾಗ, ರಾಜ್ಯ ಸರ್ಕಾರ ಈ ಸಮಸ್ಯೆಗಳನ್ನು ಸೂಕ್ತವಾಗಿ ಬಗೆಹರಿಸಲು ‘ರಾಷ್ಟ್ರೀಯ ಹಸಿರು ಮಂಡಳಿ’ಯ ಮುಂದೆ ತನ್ನ ಅಳಲನ್ನು ತೋಡಿಕೊಂಡಿತು. ಆದರೆ ‘ಹಸಿರು ಮಂಡಳಿ’ ರಾಜ್ಯದ ನೈಜ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಳ್ಳದೆ, ವಿಷಯವನ್ನು ಚರ್ಚಿಸಲು ನಿಗದಿತ ದಿನಾಂಕವನ್ನು ಗೊತ್ತುಪಡಿಸುವಲ್ಲಿ ವಿಳಂಬ ಧೋರಣೆ ತಳೆದಿರುವಂತಿದೆ. ಇದರಿಂದಾಗಿ ರಾಜ್ಯದ ಪರಿಸ್ಥಿತಿ ಬಾಣಲೆಯಿಂದ ಉರಿಯುವ ಬೆಂಕಿಗೆ ಬಿದ್ದ ಹಾಗಾಗಿದೆ.

## ಸೂಕ್ಷ್ಮವಲಯಗಳು

ಕಸ್ತೂರಿ ರಂಗನ್ ಸಮಿತಿ ಮಾಡಿರುವ ಶಿಫಾರಸು ಕೇವಲ ಪಶ್ಚಿಮಘಟ್ಟಗಳನ್ನು ಉಳಿಸುವ ನಿಟ್ಟಿನಲ್ಲಿ ಮಾತ್ರವಲ್ಲ, ಅರಣ್ಯ, ಪರಿಸರ, ಜೀವಶಾಸ್ತ್ರ ಮತ್ತು ಪರಿಸರ ಸಂರಕ್ಷಣೆಯ ಕಾಳಜಿಯನ್ನು ಪ್ರತಿಬಿಂಬಿಸುತ್ತಿದೆ. ಪ್ರಕೃತಿ ನಾಶದ ಅಪಾಯಗಳನ್ನು ತಪ್ಪಿಸುವ ನಿಟ್ಟಿನಲ್ಲಿ ರೂಪುಗೊಂಡಿರುವ ಈ ವರದಿ ಕೇವಲ ಕರ್ನಾಟಕಕ್ಕೆ ಸೀಮಿತವಲ್ಲ. ಗುಜರಾತ್, ಮಹಾರಾಷ್ಟ್ರ, ಗೋವಾ, ಕೇರಳ ಮತ್ತು ತಮಿಳುನಾಡಿನ ಒಟ್ಟರೆ 59,940 ಚ.ಕಿ.ಮೀ. ವಲಯವನ್ನು ಸೂಕ್ಷ್ಮಪ್ರದೇಶ ಎಂದು ಗುರ್ತಿಸಿದೆ.

ಪಶ್ಚಿಮಘಟ್ಟಕ್ಕೆ ತೊಂದರೆ ಆಗುವಂತಹ ಯಾವುದೇ ಅವೈಜ್ಞಾನಿಕ ನಡೆಯ ಅಭಿವೃದ್ಧಿ ಕಾರ್ಯಗಳು, ಗಣಿಗಾರಿಕೆ, ಸಿಡಿಮದ್ದು ಸಿಡಿತ, ಅರಣ್ಯನಾಶ, ರಸ್ತೆಗಳ ನಿರ್ಮಾಣ, ಕಾಡು ಕಡಿದು ಕಟ್ಟಡ ನಿರ್ಮಾಣ, ಮುಂತಾದ ಕೆಲಸಗಳನ್ನು ಮಾಡಲು ಮುಂದಾಗಬಾರದು. ಅಂತಹ ಪ್ರಕ್ರಿಯೆಗಳಿಂದ ಘಟ್ಟದ ಬುನಾದಿಗೆ ಧಕ್ಕೆಯಾಗುತ್ತದೆ. ರಾಜ್ಯದ ಸುಮಾರು 20,668 ಕಿಲೋಮೀಟರ್ ವಿಸ್ತೀರ್ಣದಲ್ಲಿ ವಾಸಿಸುವ ಜನರ ಬದುಕು ಮೂರಾಬಟ್ಟೆ ಆಗುತ್ತದೆ ಎನ್ನುವುದು ಕಸ್ತೂರಿ ರಂಗನ್ ಮತ್ತು ಗಾಡ್ಗೀಳ್ ವರದಿಗಳ ಅಭಿಪ್ರಾಯ.

ಕಸ್ತೂರಿ ರಂಗನ್ ಮತ್ತು ಗಾಡ್ಗೀಳ್ ವರದಿಗಳಲ್ಲಿ ಗುರುತಿಸಿರುವ ವಲಯಗಳನ್ನು ‘ಅತಿ ಸೂಕ್ಷ್ಮವಲಯ’ ಎಂದು ತೀರ್ಮಾನಿಸಿ, ಅಭಿವೃದ್ಧಿ ಕಾಮಗಾರಿಗಳನ್ನು ನಿಲ್ಲಿಸಿದರೆ, ಲಕ್ಷಾಂತರ ಜನ ಉದ್ಯೋಗವಂಚಿತರಾಗಿ ಅವರ ಬದುಕಿಗೆ ತೊಂದರೆಯಾಗುತ್ತದೆ, ಸರ್ಕಾರಕ್ಕೆ ಬರುವ ಆದಾಯ ನಿಂತುಹೋಗುತ್ತದೆ ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಆದರೆ, ವಿಜ್ಞಾನ ಎಂದಿಗೂ ಜನರಿಗೆ ಕೆಟ್ಟದಾಗಲಿ ಎಂದು ಆಶಿಸುವುದಿಲ್ಲ.



ನೀರೇ ವಿಷವಾದರೆ...? ಒಂದು ಕಾಲಕ್ಕೆ ಬೇರಿಂದ ನೀರನುಂಡು ಹಸಿರುಕ್ಕಿ ನಗುತ್ತಿದ್ದ ಮರವೊಂದು ಈಗ ಎದೆಮಟ್ಟ ತುಂಬಿದ ನೀರಿನಿಂದಲೇ ಒಣಗಿರುವ ಈ ಚಿತ್ರ, ಪಶ್ಚಿಮಘಟ್ಟಗಳ ಭವಿಷ್ಯದ ರೂಪಕದಂತೆಯೂ ಕಾಣಿಸುತ್ತಿದೆಯಲ್ಲವೇ?